ಹಿರಿಯ ಸಾರಂಗಿ ಕಲಾವಿದ ಪಂ. ರಾಮನಾರಾಯಣ್ ಅವರ ಬಳಿ ಸುಮಾರು 6–7 ವರ್ಷ ಕಲಿತೆ. ಈಗ ನನ್ನ ಮಗ ಸರ್ಫ್ರಾಜ್ ಖಾನ್ ಸಾರಂಗಿ ನುಡಿಸುತ್ತಾನೆ. ಇಬ್ಬರು ಮೂವರು ಶಿಷ್ಯರೂ ಇದ್ದಾರೆ.

◆ **ಹಿಂದೂಸ್ತಾನಿ ಗಾಯನಕ್ಕೆ ಅತ್ಯಂತ ಸನಿಹವಾದ ಏಕೈಕ ವಾದ್ಯ ಸಾರಂಗಿ. ಹಿಂದೆಲ್ಲ ಅಷ್ಟೊಂದು ಜನಪ್ರಿಯವಾಗಿದ್ದ ಸಾರಂಗಿ ಈಗ ತೆರೆಮರೆಗೆ ಸರಿದು, ಆ ಜಾಗವನ್ನು ಹಾರ್ಮೋನಿಯಂ ಆಕ್ರಮಿಸಿಕೊಂಡಿದೆ. ಇದು ಹೇಗಾಯಿತು?**

ಅತ್ಯಂತ ಮಧುರವಾದ ನಾದ ಕೊಡುವ ಸಾರಂಗಿ, ಗಾಯನಕ್ಕೆ ಅತ್ಯಂತ ಸನಿಹವಾದದ್ದು. ಇದರ ಸುನಾದ ಗಮಕ ಗಾಯನಕ್ಕಿಂತಲೂ ಹಿತವಾಗಿ ಕೇಳಿಸುತ್ತದೆ. ಹಿಂದೆಲ್ಲ ಹಿಂದೂಸ್ತಾನಿ ಗಾಯನಕ್ಕೆ ಪ್ರಮುಖ ಸಾಥಿವಾದ್ಯವಾಗಿ ಸಾರಂಗಿಯನ್ನೇ ಬಳಸುತ್ತಿದ್ದರು. ಏಕೆಂದರೆ ಸಾರಂಗಿಯ ತಾಲೀಮು ಕೂಡ ಹಾಡುಗಾರಿಕೆಯ ಹಾಗೇ ಆಗಬೇಕು. ಅಲ್ಲದೆ ಹಿಂದೆ ಹಾರ್ಮೋನಿಯಂ ನುಡಿಸುವ ಕಲಾವಿದರು ಇದ್ದದ್ದು ಬಹಳ ಕಡಿಮೆ. ಕ್ರಮೇಣ ಹಾರ್ಮೋನಿಯಂ ನುಡಿಸುವ ಕಲಾವಿದರು ಹೆಚ್ಚಾದರು. ಸಾರಂಗಿ ನುಡಿಸುವುದು ತುಂಬಾ ಕಷ್ಟ ಎಂಬ ಕಾರಣಕ್ಕೆ ಇದನ್ನು ಕಲಿಯುವವರು ಮುಂದೆ ಬರಲೇ ಇಲ್ಲ. ಹೀಗಾಗಿ ಸಾರಂಗಿ ಹಿಂದಕ್ಕೆ ಸರಿದು ಆ ಜಾಗವನ್ನು ಹಾರ್ಮೋನಿಯಂ ಆಕ್ರಮಿಸಿಕೊಂಡಿತು. ಈಗ ಹಿಂದೂಸ್ತಾನಿ ಗಾಯನಕ್ಕೆ ಹಾರ್ಮೋನಿಯಂ ಇಲ್ಲದೆ ಸಾಧ್ಯವೇ ಇಲ್ಲ ಎಂಬಷ್ಟು ಜನಪ್ರಿಯವಾಯಿತು. ಹಿಂದೆ 'ಸಾರಂಗಿ ಗಾಯಕಿ' ಇದ್ದದ್ದು ಈಗ 'ಹಾರ್ಮೋನಿಯಂ ಗಾಯಕಿ' ಆಗಿ ಹೋಗಿದೆ. ಸಾರಂಗಿ ತೆರೆಮರೆಗೆ ಸರಿದದ್ದು ಮತ್ತೆ ಬೇಡಿಕೆ ಪಡೆದುಕೊಳ್ಳಲೇ ಇಲ್ಲ. ಸಾರಂಗಿ ಕಲಿಯಲು ಮಕ್ಕಳೂ ಆಸಕ್ತಿ ತೋರದೇ ಇರುವ ಕಾರಣ ಸುಮಧುರ ನಾದ ಕೊಡುವ ಈ ವಾದ್ಯ ಅಕ್ಷರಶಃ ಮೂಲೆಗುಂಪಾದಂತೆ ಆಗಿದೆ.

## ನಿರ್ಮಾಣ್ ಪುರಂದರ ಸಂಗೀತರತ್ನ ಪ್ರಶಸ್ತಿ

ದಾಸ ಸಾಹಿತ್ಯ ಹಾಗೂ ದಾಸರ ಪದಗಳ ಹಿರಿಮೆಯನ್ನು ಖ್ಯಾತಿಗೊಳಿಸುವ ನಿಟ್ಟಿನಲ್ಲಿ ಸ್ಥಾಪಿಸಲಾಗಿರುವ ಬೆಂಗಳೂರಿನ 'ವೀಯೆಲ್ಲೆನ್ ನಿರ್ಮಾಣ್‌ಪುರಂದರ ಪ್ರತಿಷ್ಠಾನ'ವು ಪ್ರತಿವರ್ಷ ನೀಡುವ 'ನಿರ್ಮಾಣ್‌ಪುರಂದರ ಸಂಗೀತರತ್ನ ಪ್ರಶಸ್ತಿ' ಈ ಬಾರಿ ಉಸ್ತಾದ್ ಫಯಾಜ್‌ಖಾನ್ ಅವರಿಗೆ ಒಲಿದಿದೆ.

◆ **ಶಾಸ್ತ್ರೀಯ ಸಂಗೀತದ ಜೊತೆಗೆ ಸಿನಿಮಾ ಸಂಗೀತಕ್ಕೂ ನೀವು ಕೊಡುಗೆ ನೀಡಿದ್ದೀರಿ. ಸಿನಿಮಾ ಸಂಗೀತದ ಜೊತೆ ನಿಮ್ಮ ಅನುಸಂಧಾನದ ಬಗ್ಗೆ ಹೇಳಿ...**

ಎಲ್ಲ ಪ್ರಕಾರದ ಗಾಯನಗಳಿಗೂ ಸಾರಂಗಿ ಬೇಕು. ಸಿನಿಮಾ ಶಾಸ್ತ್ರೀಯ ಸಂಗೀತ, ಗಜಲ್, ಹಿಂದಿ, ಬೆಂಗಾಲಿ ಸಿನಿಮಾಗಳಲ್ಲಿ ಸಾರಂಗಿ ಪಾತ್ರ ಮಹತ್ವದ್ದು. ಶಾಸ್ತ್ರೀಯ ಸಂಗೀತದಿಂದ ಜೀವನ ನಿರ್ವಹಣೆ ಸಾಧ್ಯವಿಲ್ಲ ಎಂಬ ಕಟುಸತ್ಯ ಅರಿವಾದ ಮೇಲೆ ಸಿನಿಮಾ ಸಂಗೀತಕ್ಕಾಗಿ ದುಡಿದೆ. ಕಿರುತೆರೆಯ ಸೀರಿಯಲ್‌ಗಳಿಗೂ ಹಿನ್ನೆಲೆ ಗಾಯನ ಮಾಡಿದ್ದೇನೆ. ಕನ್ನಡ ಸಿನಿಮಾ ಸಂಗೀತ ನಿರ್ದೇಶಕರಾದ ವಿಜಯಭಾಸ್ಕರ್, ರಾಜನ್–ನಾಗೇಂದ್ರ, ಉಪೇಂದ್ರಕುಮಾರ್, ಎನ್.ಎಸ್. ವಿಶ್ವನಾಥನ್, ಇಳೆಯರಾಜ ಅವರೊಂದಿಗೆ, ತಮಿಳಿನ ಎ.ಆರ್. ರೆಹಮಾನ್, ಮಲಯಾಳಂನ ಎನ್. ಜಯಚಂದ್ರನ್, ರಮೇಶ್ ನಾರಾಯಣನ್ ಅವರ ಜೊತೆಗೂ ಸಂಗೀತ ನಿರ್ದೇಶನ ಕೆಲಸ ಮಾಡಿದ್ದೀನಿ. ಸಾಹಿತ್ಯ ಇಷ್ಟವಾದರೆ ಯಾವ ಸಿನಿಮಾಕ್ಕಾದರೂ ಸಂಗೀತ